

ಕಟ್ಟಡಗಳ ಭಗ್ನಾವಶೇಷಗಳ ನಡುವೆ ಕುಳಿತಿರುವ ಈ ಪ್ಯಾಲಸ್ಟೀನ್ ಬಾಲಕನ ಮನಸ್ಸಿನಲ್ಲಿ ಇರಬಹುದಾದ 2025ರ ಕುರಿತ ನಿರೀಕ್ಷೆಗಳು ಏನಾಗಿರಬಹುದು? ಫೋಟೊ: ಎಎಫ್‌ಪಿ

ಸ್ಕೂಲಲ್ಲಿ, ಮನೆಯಲ್ಲಿ, ರಸ್ತೆಯಲ್ಲಿ – ಬೂಟುಗಳ ಸಪ್ಪಳ’ ಎಂದು ಲಂಕೇಶರು ಬರೆದದ್ದು ಅರವತ್ತು ವರ್ಷಗಳ ಹಿಂದೆ; ‘ಪೊಲೀಸರಿದ್ದಾರೆ ಎಚ್ಚರಿಕೆ’ ನಾಟಕದಲ್ಲಿ. ಅಲ್ಲಿನ ಮುಖ್ಯ ಪಾತ್ರಧಾರಿ ರುದ್ರ, ಬಾಯಿ ಕಾಯುವ ಪೊಲೀಸರನ್ನೂ ಉಲ್ಲೇಖಿಸುತ್ತಾನೆ. ಇಂಥ ಬಾಯಿ ಕಾಯುವ ಪೊಲೀಸರ ಬೂಟುಗಳ ಸಪ್ಪಳ ಇಂದು ಎಲ್ಲೆಲ್ಲಿಯೂ ಕಿವಿದುಂಬುತ್ತಿದೆ.

### ಯುದ್ಧದ ಹಸಿವು

ಮಹಾಭಾರತದ ವಿರಾಟ ಪರ್ವದ ಆರಂಭದಲ್ಲಿ ಒಂದು ವರ್ಷದ ಅಜ್ಞಾತವಾಸಕ್ಕೆ ಹೊರಟ ಪಾಂಡವರು ಬನ್ನಿಯ ಮರವೊಂದರ ಕೊಂಬೆಗೆ ಹೆಣದಾಕಾರದಲ್ಲಿ ತಮ್ಮ ಆಯುಧಗಳನ್ನು ಕಟ್ಟುತ್ತಾರೆ. ಈ ರೀತಿ ಆಯುಧಗಳನ್ನು ಕಳೇಬರದ ಆಕಾರದಲ್ಲಿ ಹೊಂದಿಸಿ ಕಟ್ಟುವ ಕ್ರಿಯೆಯೇ ಶಸ್ತ್ರಾಸ್ತ್ರಗಳ ಕುರಿತು ಬಹುಮುಖ್ಯವಾದುದೇನನ್ನೋ ನಮಗೆ ತಿಳಿಸುತ್ತದೆ.

ಮ್ಯಾನ್ಮಾರ್ ದೇಶದಲ್ಲಿ ನಡೆಯುತ್ತಿರುವ ಆಂತರಿಕ ಕಲಹದಿಂದ ರೂಪಾಯಿ ಮೌಲ್ಯ ಕುಸಿದ ಪರಿಣಾಮವಾಗಿ ಆ ದೇಶದ ಮಹಿಳಾ ವೈದ್ಯರು ಆದಾಯ ಸಾಲದೇ ವೇಶ್ಯಾವೃತ್ತಿಯನ್ನು

## ಸಹೃದಯತೆ ಬದುಕನ್ನು ಆವರಿಸಲಿ

2  25

**ಶಿಶಿರ ಶಾಸ್ತ್ರಿ,**
ಕಿರುತೆರೆ–ಸಿನಿಮಾ ನಟ

2025ನ್ನು ಬರಮಾಡಿಕೊಳ್ಳುವ ಸಂಕ್ರಮಣ ಸಂದರ್ಭ ಇದು. ಸರಿಯುತ್ತಿರುವ ಸಂವತ್ಸರವನ್ನು ಒಮ್ಮೆ ಹಿಂದಿರುಗಿ ನೋಡಿ, ಬರಲಿರುವ ಹೊಸ ವರ್ಷಕ್ಕೆ ನಾಂದಿ ಹಾಡುವ ಸುಸಮಯ ಇದು. ನವವರ್ಷಕ್ಕೆ ಪ್ರಕೃತಿಯೇ ನವವಧುವಿನ ಹಾಗೆ ಸಿಂಗಾರಗೊಳ್ಳುತ್ತಿದೆ. ಪ್ರಕೃತಿಯ ಭಾಗವೇ ಆಗಿರುವ ನಮ್ಮಲ್ಲೂ ಆ ಸಂಭ್ರಮ ಇರಬೇಕಲ್ಲವೇ?

ಸಮಾಧಾನ, ಸಹಬಾಳ್ವೆ, ಸಂತೃಪ್ತಿ, ಸಹೃದಯತೆ ನಮ್ಮ ಬದುಕಿನ ಭಾಗವಾಗಲಿ. ಆ ಮೂಲಕ ಸಂತೃಪ್ತ ಬದುಕು ರೂಪಿಸಿಕೊಳ್ಳೋಣ. ಕಳೆದ ದಿನಗಳ ಯಾವುದೇ ಕಹಿ ನೆನಪುಗಳನ್ನು ಹೊಸ ವರ್ಷಕ್ಕೆ ಕೊಂಡೊಯ್ಯುವುದು ಬೇಡ. ಹಾಗೆಯೇ ಸಿಹಿನೆನಪುಗಳನ್ನು ಮರೆಯುವುದೂ ಬೇಡ. ಕನ್ನಡದ ಎಲ್ಲ ಸಹೃದಯ ಬಂಧುಗಳಿಗೆ ಈ ಕಲಾವಿದನ ಹಾರ್ದಿಕ ಶುಭಾಶಯಗಳು.

2  25

## ಶುಚಿಯಾಗಲಿ ಒಳಗೂ ಹೊರಗೂ

**ಸತೀಶ್ ಈರೇಗೌಡ,**
ಯೂಟ್ಯೂಬರ್–ಕಿರುಚಿತ್ರ ನಿರ್ದೇಶಕ

ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ದಿಟ್ಟ ನಿರ್ಧಾರಗಳನ್ನು ಕೈಗೊಳ್ಳಲು ಹೊಸ ವರ್ಷದ ಆರಂಭ ಸುಸಮಯ. ನಮ್ಮ ಸುತ್ತಮುತ್ತಲ ವಾತಾವರಣವನ್ನು ಶುಚಿತ್ವದಿಂದ ಕಾಪಿಟ್ಟುಕೊಳ್ಳಲು ದಿಟ್ಟ ನಿಲುವು ತಾಳಲೇಬೇಕಾದ ಅಗತ್ಯ ಇಂದಿನದು.

ನಾನೊಬ್ಬ ಹಲವು ದೇಶಗಳನ್ನು ಸುತ್ತಿಬಂದಿದ್ದೇನೆ. ನಾನು ನೋಡಿದ ವಿದೇಶಗಳಲ್ಲಿ, ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಅಂತಹ ವಾತಾವರಣಕ್ಕಾಗಿ ನಮ್ಮಲ್ಲೂ ಬದಲಾವಣೆಗಳನ್ನು ಈ ವರ್ಷ ಕಾಣಬಯಸುವೆ. ಕನಿಷ್ಠ ಶುಚಿತ್ವಕ್ಕೆ ಆದ್ಯತೆ ನೀಡುವ ದಿಟ್ಟ ನಿರ್ಧಾರಗಳನ್ನಾದರೂ ನಮ್ಮನ್ನಾಳುವ ಸರ್ಕಾರಗಳು ತೆಗೆದುಕೊಳ್ಳಲೇಬೇಕು. ಮನುಷ್ಯರ ಆರೋಗ್ಯದ ದೃಷ್ಟಿಯಿಂದಷ್ಟೇ ನಾನು ಈ ಮಾತನ್ನು ಹೇಳುತ್ತಿಲ್ಲ. ನಾಳಿನ ತಲೆಮಾರುಗಳ ಭವಿಷ್ಯದ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ತನ್ನ ಸುತ್ತಮುತ್ತಲ ಜಾಗವು ಶುಚಿತ್ವದಿಂದಿರುವಂತೆ ನೋಡಿಕೊಳ್ಳುವುದು ದೇಶದ ಪ್ರತಿ ನಾಗರಿಕರ ಆದ್ಯ ಕರ್ತವ್ಯ, ಜವಾಬ್ದಾರಿ. ವಾತಾವರಣ ಸ್ವಾಸ್ಥ್ಯದಿಂದ ಕೂಡಿದ್ದರೆ ತಾನಾಗಿಯೇ ಪರಿಸರ ಹಾಗೂ ನಮ್ಮ ಆರೋಗ್ಯವು ಸುಧಾರಿಸುತ್ತದೆ. ಆದರೆ ಬಹುತೇಕರು ಈ ಬಗ್ಗೆ ಉದಾಸೀನರಾಗಿದ್ದಾರೆ. ಕಾಳಜಿ ವಹಿಸದೆ ವಾತಾವರಣವನ್ನು ಇನ್ನಷ್ಟು ಹದಗೆಡಿಸುತ್ತಿದ್ದಾರೆ. ಪ್ಲಾಸ್ಟಿಕ್ ಪರಿಸರಕ್ಕೆ ಹಾನಿಕಾರಕ ಎಂದು ತಿಳಿದಿದ್ದರೂ ಅದರ ಬಳಕೆಗೆ ಮತ್ತಷ್ಟು ಒಗ್ಗಿಕೊಳ್ಳುತ್ತಿದ್ದಾರೆ. ಇದು ಭವಿಷ್ಯದ ಸಮಾಜಕ್ಕೆ ಮಾರಕ.

ಪ್ಲಾಸ್ಟಿಕ್ ಉದಾಹರಣೆಯನ್ನೇ ನೋಡಿ. ಪೋಷಕರು ಗೊತ್ತಿದ್ದೂ, ಗೊತ್ತಿದ್ದೂ ಪ್ಲಾಸ್ಟಿಕ್ ಬಳಕೆಗೆ ಮಕ್ಕಳನ್ನು ಪ್ರೇರೇಪಿಸುತ್ತಿದ್ದಾರೆ. ನಾಳಿನ ದಿನಗಳನ್ನು ನಿರ್ಮಾಣ ಮಾಡಬೇಕಿರುವ ಮಕ್ಕಳಲ್ಲಿ ಈ ಕನಿಷ್ಠ ತಿಳಿವಳಿಕೆಯನ್ನು ನಾವೇ ಮೂಡಿಸದಿದ್ದರೆ ಹೇಗೆ? ಶುಚಿತ್ವಕ್ಕೆ ಆದ್ಯತೆ ನೀಡಲು ಮಕ್ಕಳು ಮುಂದಾದರೆ, ಅವರ ಆರೋಗ್ಯದ ಕಾಳಜಿಯ ನೆಪವೊಡ್ಡಿ ಮಕ್ಕಳನ್ನು ಪೋಷಕರು ತಡೆಯುತ್ತಾರೆ. ಡಸ್ಟ್‌ಬಿನ್‌ಗೆ ಹಾಕಲು ಮುಂದಾದರೂ ‘ಕಸ ಮುಟ್ಟುತ್ತೀಯಾ’ ಎಂದು ಗದರುವ ಪೋಷಕರೂ ಇದ್ದಾರೆ. ಈ ವಿಚಾರಗಳಲ್ಲಿ ಬದಲಾವಣೆಯ ಗಾಳಿ ಬೀಸಬೇಕಿದೆ; ಎಲ್ಲ ಹಂತದಲ್ಲೂ ಪರಿಸರ ಕಾಳಜಿ ಮತ್ತು ವಾತಾವರಣ ಶುಚಿತ್ವಕ್ಕೆ ಆದ್ಯತೆ ನೀಡಬೇಕಿದೆ.